


### ಹಾಸ್ಯ ಸಂಚಿಕೆ 'ಸುಧಾ' ನಂ.1

'ಸುಧಾ' ಏಪ್ರಿಲ್ ಹಾಸ್ಯ ಸಂಚಿಕೆಯ ಭಕ್ತ ಪ್ರಹ್ಲಾದ ಬಂದ್ರು ಸ್ವಾ..– ಬಿ.ಎಂ.ಹನೀಫ್ ಏಪ್ರಿಲ್ ವಾರ್ತೆಗಳು– ದೇವಿದಾಸ ಸುವರ್ಣ, ಕೃಷ್ಣೇಗೌಡರ ಸಂದರ್ಶನ– ಎನ್.ರಾಮನಾಥ್ ಬರಹಗಳು ನಕ್ಕು ನಲಿಸಿದವು. ಪ್ರಕಾಶ್ ಶೆಟ್ಟಿ ಹಾಗೂ ಭಾವು ಪತ್ತಾರ್ ಚಿತ್ರಗಳು ಸಂದರ್ಭೋಚಿತವಾಗಿದ್ದು ಖುಷಿ ಕೊಟ್ಟವು. ಏಪ್ರಿಲ್ ಹಾಸ್ಯ ಸಂಚಿಕೆ ರೂಪಿಸುವಲ್ಲಿ ಯಾವಾಗಲೂ 'ಸುಧಾ' ಪತ್ರಿಕೆಯೇ ನಂಬರ್ ಒನ್. ಅದನ್ನು ಮುಂದುವರಿಸಿದ್ದೀರಿ.

ಡಾ.ಕೆ.ಕೆ.ಜಯಚಂದ್ರಗುಪ್ತ, ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ/ ಸರಸ್ವತಿ ಶಂಕರ್, ಶ್ಯಾಮ್ ಸುಂದರ್, ಪಟ್ಟಾಂಗದ ಪಟ್ಟಾಭಿ, ಎಸ್.ಪ್ರಭಾ, ಬೆಂಗಳೂರು/ ಬಿ.ಎನ್.ಸೊಲ್ಲಾಪುರೆ, ಕಮಲನಗರ/ ನಾರಾಯಣ ಯಾಜಿ, ಶಿರಾಜಿ/ ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ/ ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ನೇ.ಗೋ.ಭ., ಕುಕ್ಕೆ ಸುಬ್ರಹ್ಮಣ್ಯ

### ಒದ್ದೆಯಾದ ಕಲ್ಲು!

'ಕಲ್ಲಾಗಿ ಬಿದ್ದಿದ್ದರೂ ಒದ್ದೆಯಾಗುವುದು ತಪ್ಪಲಿಲ್ಲ!' ಎಂದು ಅಹಲ್ಯೆ ಹೇಳಿದಳೆಂಬ ರಾ.ಶಿ. ಅವರ ಮೊನಚು ಮಾತು ಕೃಷ್ಣೇಗೌಡರ ಉತ್ತರದಲ್ಲಿ ಕಾಣೆಯಾಗಿತ್ತು. ರಾಶಿ ಇದನ್ನು 'ಕೊರವಂಜಿ' ಯಲ್ಲಿ ಬರೆದಿದ್ದರು.

–ಕೆ.ವಿ.ಲಕ್ಷ್ಮೀನಾರಾಯಣ, ಬೆಂಗಳೂರು

### ಉತ್ತರ ಕರ್ನಾಟಕ ಮರೆತಿರಿ

ಹಾಸ್ಯ ಮಾಡಲಿಕ್ಕೆ, ಮೊನಚಾದ ಮಾತುಗಳನ್ನು ಆಡಲಿಕ್ಕೆ ಉತ್ತರ ಕರ್ನಾಟಕದ ಆಡುಭಾಷೆ ಇನ್ನೂ ಸೊಗಸು. ಇಡೀ ಸಂಚಿಕೆಯಲ್ಲಿ ಉತ್ತರ ಕರ್ನಾಟಕದ ಆಡುಭಾಷೆ ಬಳಕೆಯಾಗದಿದ್ದುದು ಮಾತ್ರ ಒಂದು ಕೊರತೆಯಾಗಿತ್ತು.

–ಪತ್ರೇಶಿ, ಹಗರಿ ಬೊಮ್ಮನಹಳ್ಳಿ

### ಮೂರ್ಖನಾದೆ! ಆದರೂ ಸಂಭ್ರಮ

ಹಾಸ್ಯ ಸಂಚಿಕೆಯೆಂದು ಸಂಭ್ರಮಿಸಿ ಒಳಗೆ ಹೋದಾಗ 'ಏಪ್ರಿಲ್ ಫೂಲ್' ಆದದ್ದು ಖಂಡಿತ. 'ನಕ್ಕುಬಿಡಿ' ಅಂಕಣವೇ ಮಾಯ! ಆದರೆ ಸಂಭ್ರಮಿಸಲು 'ನನಗೆ' ಕಾರಣವಿತ್ತು. ಬರವಣಿಗೆಯಲ್ಲಿ ಅಂಬೆಗಾಲಿಡುತ್ತಿರುವ ನನ್ನಂತಹವನ ಲೇಖನವನ್ನು ಪ್ರಕಟಿಸಿದ್ದಕ್ಕೆ ಧನ್ಯವಾದಗಳು.

–ಹಾಡ್ಯ ಬಿ.ಜಯಾನಂದ, ಮೈಸೂರು

### ತಲ್ಲಣಗಳ ಲಹರಿ

'ನಗರ ಜೀವನದ ತಲ್ಲಣ'ಗಳ ಕುರಿತು ವೈನತೇಯ ಅವರ ವಿಚಾರ ಲಹರಿ ಚೆನ್ನಾಗಿ ಮೂಡಿಬಂದಿದೆ.

–ಸ್ಮಿತಾ ಮೈಸೂರ, ಹುಬ್ಬಳ್ಳಿ/ ನೆ.ಲ.ರಾಂ, ಬೆಂಗಳೂರು/ ಜಿ.ಎನ್.ಪ್ರಸನ್ನಕುಮಾರ್, ತುಮಕೂರು/ ಚನ್ನಬಸವ ಪುತ್ತೂರ್ಕರ, ಚಿತ್ರದುರ್ಗ

### ಮುತ್ತಿನಂತಹ ಮಾತು

'ಮಾತೇ ಮುತ್ತು' ಅಂಕಣದ ಶೀರ್ಷಿಕೆ ತುಂಬಾ ಅನ್ವರ್ಥಕ. ಯಾಕೆಂದರೆ ಅನುಭ(ಭಾ)ವಿಗಳ ಮುತ್ತಿನಂತಹ ಮಾತುಗಳನ್ನೇ ಹೆಕ್ಕಿ ಪ್ರಕಟಿಸುತ್ತಿದ್ದೀರಿ.

–ಶ್ರೀನಾಥ್ ಕೊನೇಟಿ, ಬೆಂಗಳೂರು

### ಟಿವಿ ಸ್ಪರ್ಧೆ: ಮಾರ್ಮಿಕ ಕಥೆ

ಟಿವಿ ಸ್ಪರ್ಧಾತ್ಮಕ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಆಸಕ್ತಿ ಇರುವವರು ಒಮ್ಮೆ ಎಚ್. ಎಸ್. ಪಾರ್ವತಿಯವರ 'ಸ್ಪರ್ಧೆ' ಕಥೆ ಓದಿ ಜಾಗ್ರತರಾಗುವುದು ಒಳ್ಳೆಯದು. ಚಿಕ್ಕ, ಚೊಕ್ಕ ಕಥೆ ತುಂಬಾ ಮಾರ್ಮಿಕವಾಗಿದೆ.

ನೇ.ಗೋ.ಭ., ಕುಕ್ಕೆ ಸುಬ್ರಹ್ಮಣ್ಯ/ ಸರಳಾ ಹಾದಿಮನಿ, ಧಾರವಾಡ

### ಶಹಭಾಷ್ ಪೋರ!

'ವಂಡರ್ ಪುಟ'ದಲ್ಲಿ 'ಪೋರನ ಸಾಹಸ!' ಚಿತ್ರ ನೋಡಿ– ಓದಿ ಮೆಚ್ಚುಗೆಯಾಯಿತು.

–ಎಚ್.ಆನಂದಕುಮಾರ್, ಚಿತ್ರದುರ್ಗ

### ಯುಗಾದಿ ವಿಶೇಷಾಂಕದ ಸವಿ ಹೋಳಿಗೆ

'ಸುಧಾ' ಯುಗಾದಿ ವಿಶೇಷಾಂಕ ಮನೆ– ಮನ ತಲುಪಿ ಸವಿಯಾದ ಹೋಳಿಗೆ ಊಟದಂತೆ ರುಚಿಸಿತು. ಮಹಿಳೆಯರ ಕುರಿತ ಸುದೀರ್ಘ ಲೇಖನಗಳು, ಬಹುಮಾನಿತ ಹಾಸ್ಯ ಲೇಖನಗಳು, ಓದುಗರ ವೇದಿಕೆ, ಚಿತ್ರರಂಗ, ಕಿರುತೆರೆ, ರಂಗಭೂಮಿ, ನಾದ ಚಿಕಿತ್ಸೆ, ಅಡುಗೆ, ಮಕ್ಕಳ ಮೈದಾನ ಮುಂತಾದವು ಅಬಾಲ ವೃದ್ಧರಾದಿಯಾಗಿ ಎಲ್ಲರಿಗೂ ಇಷ್ಟವಾದವು. ಮದುವೆ ಆಭರಣದ ಉಚಿತ ಕೊಡುಗೆ ಸೂಜಿಗಲ್ಲಿನಂತೆ ಸೆಳೆಯಿತು. ಬಹುಕಾಲ ನೆನಪಿನಲ್ಲಿ ಉಳಿಯುವಂತಹ, ಎಲ್ಲರ ಮನೆಯಲ್ಲಿ ಇರಬೇಕಾದ ಸಂಚಿಕೆಯಾಗಿದೆ.

–ಕಾಳೀಹುಂಡಿ ಶಿವಕುಮಾರ್, ಮೈಸೂರು

### ಸಂಭ್ರಮಕ್ಕೆ ಮತ್ತೊಂದು ಗರಿ

ಹೆಣ್ಣನ್ನು ಕೇಂದ್ರವಾಗಿಟ್ಟುಕೊಂಡು ಚರ್ಚಿಸಿದ ಲೇಖನಗಳು ಯುಗಾದಿ ಸಂಭ್ರಮಕ್ಕೆ ಮತ್ತೊಂದು ಗರಿ ಮೂಡಿಸಿತು. ಬಡಿಗೇರ, ಹಾದಿಮನಿ ವಿನ್ಯಾಸ ಮಾಡಿದ ಪ್ರತಿ ಪುಟಗಳು ಮನಸ್ಸಿಗೆ ರಂಜನೆ ನೀಡಿದವು. ಹಾಸ್ಯ ಲೇಖನ ಸ್ಪರ್ಧೆ ಏರ್ಪಡಿಸಿದ್ದು ಅತ್ಯಂತ ಔಚಿತ್ಯಪೂರ್ಣ. ಮೊದಲ ಬಹುಮಾನ ಪಡೆದ ಲೇಖನ ಓದಿ ಬಿದ್ದು ಬಿದ್ದು ನಕ್ಕೆವು.




–ನಿತ್ಯ ಎಸ್.ಮೂಡಬಿದಿರೆ/ ವಿ.ಆರ್.ಪ್ರತಿಭಾ, ಮೈಸೂರು

### ಆಕರ್ಷಕ ಸಂಚಿಕೆ

ಮಹಿಳೆಯರ ಸಮಸ್ಯೆಗೆ ಒತ್ತು ನೀಡಿ ರಚಿಸಿದ ಯುಗಾದಿ ವಿಶೇಷಾಂಕ ಆಕರ್ಷಕವಾಗಿತ್ತು. ಕೃಪಾಕರ ಸೇನಾನಿಯವರ ಬರಹ ಪ್ರಬಂಧದಂತೆ ಓದಿಸಿಕೊಂಡಿತು. ಸಾಲಿ, ಚೆನ್ನಣ್ಣ, ಸಬರದ ಕವಿತೆಗಳು ಚೆನ್ನಾಗಿದ್ದವು. ಮಹಿಳಾ ನಿರ್ದೇಶಕಿಯರ ಸಂದರ್ಶನ, ಬೀದಿ ನಾಟಕದ ಹಾದಿ ಓದಲು ಖುಷಿ ಕೊಟ್ಟವು.

–ಕೊಹಿಮ, ಬಸರಕೋಡು




